ಹಸುರುಪ್ರೀತಿ



# ಕಳ್ಳಿ ಹೂ ಅರಳಿದಾಗ...





ಸೀಮಾ ಹೆಗಡೆ

ಅಲಂಕಾರಿಕ ಗಿಡಗಳ ಹುಚ್ಚು ಹತ್ತಿದ ಪ್ರಾರಂಭದ ದಿನಗಳಲ್ಲಿ ಲೆಕ್ಕವಿಲ್ಲದಷ್ಟು ಸಸಿಗಳನ್ನು ಖರೀದಿಸಿ ಮನೆಗೆ ತರುತ್ತಿದ್ದೆ. ಅವುಗಳಲ್ಲಿ ಹೆಚ್ಚಿನವು, ಕ್ಯಾಕ್ಟೈ ಮತ್ತು ಸಕ್ಯುಲೆಂಟ್‌ಗಳಾಗಿರುತ್ತಿದ್ದವು. ನಾಲ್ಕಾರು ವರ್ಷದ ನಂತರ, ಹೂಕುಂಡ ಮೀರಿ ಬೆಳೆದ ಸಸ್ಯಗಳನ್ನು ತಾಯಿಯಿಂದ ಬೇರ್ಪಡಿಸಿ ಮರಿಗಳನ್ನು ಬೆಳೆಸುತ್ತಾ ಪುಟ್ಟದೊಂದು ನರ್ಸರಿಯೇ ನಿರ್ಮಾಣವಾಗಿದೆ. ಇವೆಲ್ಲವನ್ನೂ ನಮ್ಮ ಮನೆಗೆ ಬಂದ ನೆಂಟರಿಗೂ ಅತಿಥಿಗಳಿಗೂ ಹಂಚುತ್ತಾ ಇರುತ್ತೇನೆ. ಹೀಗೆ ಕೊಟ್ಟಾಗೆಲ್ಲಾ ಅವರು ನನ್ನ ಎದುರಿಡುವ ಮೊದಲ ಪ್ರಶ್ನೆ 'ಇದು ಹೂ ಬಿಡುತ್ತಾ?'.

ನಾನು ಗಮನಿಸಿದಂತೆ ಕಳ್ಳಿಗಿಡಗಳೆಂದರೆ ಸ್ಥಳೀಯರಿಗೆ ತಾತ್ಸಾರ. ಮುಳ್ಳು ಮೈಯ ಸಸ್ಯಗಳನ್ನು ಮನೆಯಲ್ಲಿಟ್ಟುಕೊಂಡರೆ ಜಗಳವಾಗುತ್ತದೆಂಬ ಭ್ರಮೆ. ಡೇರೆ, ಸೇವಂತಿಗೆ, ಗುಲಾಬಿ, ಎಲ್ಲರಿಗೂ ಹೂ ಬಿಡುವ ಸಸ್ಯಗಳೆಂದರೆ ಪ್ರೀತಿ. ಕಮಲದ ಹೂ ಪಕ್ಕಕ್ಕಿಡಿ, ಇವರ ಮಟ್ಟಿಗೆ ದಾಸವಾಳವೇ ನ್ಯಾಷನಲ್ ಫ್ಲವರ್. ಆದರೂ ಇವರೆಲ್ಲರೂ ಬ್ರಹ್ಮಕಮಲ ಎಂದು ತಪ್ಪಾಗಿ ಕರೆಸಿಕೊಳ್ಳುವ 'ಎಪಿಫಿಲ್ಲಮ್ ಆಕ್ಸಿಪೆಟಲಮ್' ಹೂವಾದಾಗ ಮಾತ್ರ ಫೋಟೊ ತೆಗೆಯುವುದೇನು, ಸಾಮಾಜಿಕ ಜಾಲತಾಣದಲ್ಲಿ ಹಂಚಿಕೊಳ್ಳುವುದೇನು! ಇದು ಕೂಡ ಕ್ಯಾಕ್ಟೈ ಎಂದು ಗೊತ್ತಿರದೆ!

ಹೌದು. ಕ್ಯಾಕ್ಟೈಗಳು ಹೂ ಬಿಡಬಲ್ಲವು. ಹೂಗಳ ಹೊಸ ಲೋಕವನ್ನೇ ತೆರೆದಿಡಬಲ್ಲವು. ಪ್ರಪಂಚದ ಕೆಲವೆಡೆ ಕ್ಯಾಕ್ಟೈನ ಹೂವು ಮೊಗ್ಗುಗಳನ್ನು ಹುರಿದು ತರಕಾರಿಯಾಗಿ ಸೇವಿಸುವುದೂ ಇದೆ. ಸಲಾಡ್, ಚಹಾ, ಸೂಪ್‌ಗಳಲ್ಲಿ ಬಳಸುವುದೂ ಇದೆ.



ಜಗತ್ತಿನಲ್ಲಿರುವ ಕ್ಯಾಕ್ಟೈ ಜಾತಿಗಳಲ್ಲಿ 99ರಷ್ಟು ಜಾತಿಯವು ಅಮೆರಿಕ ಮೂಲದವು. ಅಲ್ಲಿಯ ತಮ್ಮ ನೈಜ ಆವಾಸಸ್ಥಾನಗಳಲ್ಲಿ ಪರಾಗಸ್ಪರ್ಶಕ ಜೀವಿಗಳನ್ನು ಅವಲಂಬಿಸಿ ಹಗಲು ರಾತ್ರಿಯೆಂದು ತಮ್ಮ ಹೂ ಬಿಡುವ ಸಮಯಗಳನ್ನು ಹೊಂದಿಸಿಕೊಂಡಿವೆ. ಬಾವಲಿಗಳಿಂದ ಪರಾಗಸ್ಪರ್ಶ ಹೊಂದುವ ಹಂಬಲದಿಂದ ರಾತ್ರಿ ಸಮಯದಲ್ಲಿ ಹೂ ಬಿಡುವ ಹೆಚ್ಚಿನ ಕ್ಯಾಕ್ಟೈಗಳು ಹಮ್ಮಿಂಗ್ ಬರ್ಡ್‌ನಂತಹ ಹಕ್ಕಿಗಳನ್ನು ಆಕರ್ಷಿಸುತ್ತಾ ಹಗಲಲ್ಲೂ ಅರಳಬಲ್ಲವು.

'ಎಪಿಫಿಲ್ಲಮ್'ನಂತೆ ಒಂದೇ ದಿನದಲ್ಲಿ ಬಾಡಿ ಹೋಗಬಲ್ಲವು ಅಥವಾ 'ಜಿಮ್ನೋ'ಗಳಂತೆ ಒಂದು ವಾರದವರೆಗೂ ತಾಜಾ ಇರಬಲ್ಲವು. ಈಸ್ಟರ್ ಲಿಲ್ಲಿ, ಮಂಕಿ ಟೇಲ್, ಕ್ರಿಸ್‌ಮಸ್, ಓಲ್ಡ್ ಲೇಡಿ, ಹೆಡ್ಜ್‌ಹಾಗ್, ಕ್ರೌನ್ ಕ್ಯಾಕ್ಟೈನಂತಹ ಹತ್ತು ಹಲವು ತರಹದವು ಕೆಂಪು, ಗುಲಾಬಿ, ಕೇಸರಿ, ಹಳದಿ, ಬಿಳಿ ಬಣ್ಣದ ಹೂ ಬಿಟ್ಟು ನಿಂತಾಗ ಅವುಗಳ ನೋಟದ ಮಾಟವೇ ಬೇರೆ. ಇವುಗಳನ್ನು ನಾವೇ ಕಾಳಜಿವಹಿಸಿ ಪರಾಗಸ್ಪರ್ಶ ಮಾಡಿದರೆ ಬೀಜಗಳನ್ನು ಪಡೆದು ಮತ್ತಷ್ಟು ಸಸಿಗಳನ್ನು ತಯಾರಿಸಬಹುದು.

ನಾನೂ ಎಲ್ಲರಂತೆ ಮೊದಮೊದಲು ಕ್ಯಾಕ್ಟೈಗಳನ್ನು ಬಂಜರು ಭೂಮಿಯ ಬಡಪಾಯಿಗಳು ಎಂದುಕೊಂಡಿದ್ದೆ. ಆದರೆ ನನ್ನಲ್ಲಿರುವ ಒಂದೊಂದೇ ಕ್ಯಾಕ್ಟೈ ಹದಿವಯಸ್ಸಿಗೆ ಹೂ ಬಿಟ್ಟು ನಳನಳಿಸಿದಾಗ ಮುಖ ಅರಳಿಸಿದ್ದಿದೆ. ಹೆರಿಗೆಗೆಂದು ತವರು ಮನೆ ಸೇರಿ ಆರೇಳು ತಿಂಗಳ ಮೇಲೆ ವಾಪಸ್ಸು ಮನೆ ಸೇರಿದಾಗ ಕನಿಷ್ಠ ಕಾಳಜಿಯಲ್ಲೂ ಅವು ಜೀವ ಹಿಡಿದಿಟ್ಟುಕೊಂಡ ಪರಿ ನೋಡಿ ಆಶ್ಚರ್ಯಪಟ್ಟಿದ್ದೆ. ವಿರಳವಾಗಿ ಹೂ ಬಿಟ್ಟರೇನು, ವಿಶೇಷವಾದ ಈ ಸಸ್ಯಕುಲವನ್ನು ನೀವೂ ಬೆಳೆಸಿ ನೋಡಿ. ■